## ನಾಗರಾಜವಿರಚಿತಂ

# ಶ್ರೀರಾಮಚಂದ್ರಶತಕಮ್

ಸ್ವಾಮಿನ್ ಪ್ರಭೋ ದಶರಥಾತ್ಮಜ ಮೈಥಿಲೀಶ
ಶ್ರೀಕೋಸಲೇಂದ್ರ ಭರತಾಗ್ರಜ ರಾವಣಾರೇ।
ಭಕ್ತಾಂಜನೇಯಹೃದಯಸ್ಥಿತ ರಾಘವೇತಿ
ಜಿಹ್ವಾ ವದತ್ವವಿರತಂ ಮಮ ರಾಮಚಂದ್ರ ॥1॥

ಸ್ವಾಮಿ ದಶರಥಸುತನೆ ಮೈಥಿಲೀಪ್ರಿಯನೆ
ಕಾಮಿತಂಗಳ ಕೊಡುವ ಕೋಸಲದ ದೊರೆಯೆ
ಶ್ರೀಮಾರುತಿಯ ಮನದಿ ನೆಲಸಿರುವನೇಯೆಂದು
ಮಮ ರಸಜ್ಞೆಯು ಪೇಳ್ಗೆ ರಾಮಚಂದ್ರ

ನಾಹಂ ಜಾನೇ ನಿಗಮವಿತತಿಂ ನಾಪಿ ಶಾಸ್ತ್ರೌಘಸಾರಂ
ವೇದಾಂತಾರ್ಥಃ ಸಪದಿ ವಿದಿತೋ ನೈವ ಪುಣ್ಯಂ ನ ಲಬ್ಧಮ್ ।
ವಿದ್ಯಾ ಹೃದ್ಯಾ ಗುರುಪದತಲೇ ಶ್ರದ್ಧಯಾ ನಾಪ್ಯಧೀತಾ
ತ್ವಂ ಮೇ ಸ್ವಾಮಿನ್ ಶರಣಮಧುನಾ ರಕ್ಷ ಮಾಂ ರಾಮಚಂದ್ರ ॥2॥

ವೇದದರಿವೆನಗಿಲ್ಲ ಶಾಸ್ತ್ರವೂ ತಿಳಿದಿಲ್ಲ
ವೇದಾಂತವೆಂತಹುದೊ ನನಗೆ ಗೊತ್ತಿಲ್ಲ
ವಿದ್ಯೆ ನಾ ಕಲಿತಿಲ್ಲ ಗುರುಕುಲದಿ ಭವದೀಯ
ಪಾದಗಳೆ ಶರಣೆನಗೆ ರಾಮಚಂದ್ರ

ಕೇಚಿದ್ವಿಷ್ಣುಂ ಶಿವಮಥ ಪರೇ ವಿಘ್ನರಾಜಂ ತಥಾನ್ಯೇ
ಗೌರೀಂ ಲಕ್ಷ್ಮೀಂ ಕತಿಚನ ಜಿನಂ ಪ್ರಾರ್ಥಯಂತೇಽತ್ರ ಭಕ್ತಾಃ ।
ಸರ್ವಾಸಾಂ ತ್ವಾಂ ಸಪದಿ ಕಲಯನ್ ಸಂಗಮಂ ದೇವತಾನಾಂ
ಗೃಹ್ಣಾಮಿ ತ್ವಚ್ಚರಣನಲಿನಂ ರಕ್ಷ ಮಾಂ ರಾಮಚಂದ್ರ ॥3॥

ಹರಿಯೆಂದು ಶಿವನೆಂದು ವಿಘ್ನವಾರಣನೆಂದು
ಗೌರಿಲಕ್ಷ್ಮಿಯರೆಂದು ಜನರು ಬಣ್ಣಿಪರು
ಸಾರಿ ದೇವಗಣಸಂಗಮವೆ ನೀನೆಂದು
ಸೇರುವೆನು ನಿನ್ನೊಳಗೆ ರಾಮಚಂದ್ರ

ಪಶ್ಯಾಮಿ ತ್ವಾಂ ದಿಶಿದಿಶಿ ಸದಾಕರ್ಣಯಾಮಿ ತ್ವದೀಯಂ
ನಾಮ ಸ್ತೋತ್ರಂ ತವ ವಿರಚಯಾಮ್ಯತ್ರ ಚೈಕಾಗ್ರಚಿತ್ತಃ।
ಹಸ್ತಾಭ್ಯಾಂ ತ್ವಚ್ಚರಣಯುಗಲಸ್ಯಾರ್ಚನಾಂ ದೇವ ಕುರ್ವೇ
ವಂದೇ ಮೂರ್ಧ್ನಾ ವಿನಯವಿನತೋ ರಕ್ಷ ಮಾಂ ರಾಮಚಂದ್ರ ॥4॥

ನೇತ್ರಗಳು ನೋಡುವುವು ನಿನ್ನ ರೂಪವ ದೊರೆಯೆ
ಶ್ರೋತ್ರಗಳು ನಾಮಸುಧೆ ಹೀರಿ ನಲಿಯುವುವು
ಸ್ತೋತ್ರ ಮಾಡುವುದೆನ್ನ ಚಿತ್ತವೇಕಾಗ್ರ ನಾಂ
ಪಾತ್ರ ಕರುಣೆಗೆ ತಂದೆ ರಾಮಚಂದ್ರ

ಭವತ್ಸಮಾನೋ ನ ಭವಸ್ಯ ಹರ್ತಾ
ಜಗೌ ಭವೋ ನಾಮಸಹಸ್ರತುಲ್ಯಮ್ ।
ಶ್ರೀರಾಮನಾಮೇತಿ ತತೋಽಸ್ಮಿ ದಾಸ-
ಸ್ತ್ವನ್ನಾಮಧೇಯಸ್ಯ ಹಿ ರಾಮಚಂದ್ರ ॥5॥

ಪರಶಿವನೆ ಪೇಳಿದನು ಪರ್ವತಾತ್ಮಜೆಗಂದು
ಹರಿನಾಮ ಸಾಹಸ್ರ ರಾಮನಾಮಕೆ ಸಮಂ ।
ಶ್ರೀರಾಮನಾಮಕ್ಕೆ ದಾಸ ನಾಂ ನಿನ್ನ ಸಮ
ರಾರಿಹರು ಭವಹರರು ರಾಮಚಂದ್ರ

**ಪಶ್ಯಾಮಿ ತೇ ಲೋಕಮನೋಜ್ಞರೂಪಂ**
**ಸ್ತೋತ್ರಂ ತ್ವದೀಯಂ ಮಧುರಂ ಶೃಣೋಮಿ ।**
**ಜಪಾಮಿ ತೇ ನಾಮ ಸದಾ ಸುಧಾಭಂ**
**ನಮಾಮಿ ಪಾದೌ ತವ ರಾಮಚಂದ್ರ ॥6॥**

ನೋಡುತಿರುವೆನು ನಿನ್ನ ಚೆಲುವು ತುಂಬಿದ ರೂಪ
ಹಾಡುತಿರುವೆನು ನಿನ್ನ ಮಧುರ ಗೀತೆಗಳ
ಮಾಡುತಿರುವೆನು ದೇವ ನಿನ್ನ ಮಂತ್ರದ ಜಪವ
ಪೊಡಮಡುವೆ ಪಾದಕ್ಕೆ ರಾಮಚಂದ್ರ

**ಮನೋ ಮದೀಯಂ ಮಧುರಂ ತ್ವದೀಯಂ**
**ಸೋತ್ಕಂಠಮಾಸ್ವಾದಯತಿ ಸ್ವರೂಪಮ್ ।**
**ನೀರೂಪಮಾದ್ಯಂ ಯದಿ ತೇಽಸ್ತಿ ತತ್ತ್ವಂ**
**ಹೃನ್ಮೇ ನ ತದ್ ವಾಂಛತಿ ರಾಮಚಂದ್ರ ॥7॥**

ನಿನ್ನ ಸುಂದರರೂಪಮಂ ಮನವು ಸವಿಯುತಿದೆ
ಚೆನ್ನವಿದೆ ನನಗೆಂದು ಹೃದಯ ನುಡಿಯುತಿದೆ
ಸನ್ನುತನೆ ನೀರೂಪತತ್ತ್ವವೊಂದಿರಲಿ ಬಿಡು
ನನ್ನ ಮನಕದು ಬೇಡ ರಾಮಚಂದ್ರ

**ತ್ವನ್ನಾಮ ನೃತ್ಯೇದ್‌ರಸನಾಂಗಣೇ ಚೇತ್**
**ಕಿಂ ವೇದಮಂತ್ರೈರಥವಾ ಪುರಾಣೈಃ ।**
**ತ್ವದ್‌ಧ್ಯಾನಯುಕ್ತಂ ಹೃದಯಂ ಸದಾ ಚೇತ್**
**ಕಿಂ ವಾ ತಪೋಭಿರ್ಮಮ ರಾಮಚಂದ್ರ ॥8॥**

ನಿನ್ನ ನಾಮಗಳೆನ್ನ ರಸನೆಯಲಿ ನರ್ತಿಸಲಿ
ಬಿನ್ನಾಣವೇತಕ್ಕೆ ವೇದಶಾಸ್ತ್ರಗಳ
ಚೆನ್ನಾದ ಮನದಿಂದ ನಾಂ ಧ್ಯಾನ ಮಾಡುತಿರೆ
ಮನ್ನಣೆಯ ತಪವೇಕೆ ರಾಮಚಂದ್ರ

ನಾಕಾಯತೇ ಶೋಕಮಯೋಽಪಿ ಲೋಕೋ
ಮಿತ್ರಾಯತೇ ಶತ್ರುರಪಿ ಪ್ರಕೃತ್ಯಾ ।
ಸುಖಾಯತೇ ದುಃಖಮಪಿ ತ್ವದೀಯೌ
ಪಾದೌ ಶ್ರಿತಾನಾಮಿಹ ರಾಮಚಂದ್ರ ॥9॥

ಶೋಕಮಯ ಲೋಕವೂ ನಾಕವೇ ಭಕ್ತನಿಗೆ
ಸಾಕಿನ್ನು, ಭಯವೇಕೆ ಶತ್ರುವೂ ಮಿತ್ರ
ದುಃಖವೂ ಸಂತೋಷ, ಹಾನಿಯೂ ಲಾಭವೈ
ಸಾಕೇತಪುರವಾಸ ರಾಮಚಂದ್ರ

ಅಪಂಡಿತಸ್ಸನ್ನಪ್ಯಕವಿಸ್ತ್ವದೀಯೈ-
ರ್ಗುಣೈಃ ಪ್ರಣುನ್ನಃ ಸ್ತವಮಾತನೋಮಿ ।
ಚೇಷ್ಟಾಂ ಶಿಶೋಸ್ತಜ್ಜನನೀವ ಮುಗ್ಧಾಂ
ಸಹಸ್ವ ವಾಚಂ ಮಮ ರಾಮಚಂದ್ರ ॥10॥

ಪಂಡಿತನು ನಾನಲ್ಲ ಕವಿಯು ಮೊದಲೇ ಅಲ್ಲ
ಗುಂಡಿಗೆಯು ನಿನ್ನಲ್ಲಿ ನೆಲೆಸಿದೆಯೊ ಒಡೆಯ
ಪುಂಡಮಗುವಿನ ತೆರದಿ ಮೊಂಡುತನದಿಂ ಕವಿತೆ
ಮಾಡುವೆನು ನೀ ಸಹಿಸು ರಾಮಚಂದ್ರ

ವೈಕುಂಠಲೋಕೇ ರಮಯಾ ಸಹ ತ್ವಂ
ಶ್ರೀವಿಷ್ಣುರೂಪೋ ವ್ಯಹರಶ್ಚಿದಾತ್ಮಾ ।
ತ್ವದ್ವಾರಪಾಲಾವಸುರಾವಭೂತಾಂ
ಮುನೀಂದ್ರಶಾಪಾದ್ ಭುವಿ ರಾಮಚಂದ್ರ ॥11॥

ವೈಕುಂಠಲೋಕದೊಳು ವಿಷ್ಣುರೂಪದಿ ನೀನು
ಲಕುಮಿದೇವಿಯ ಜೊತೆಗೆ ಶೋಭಿಸಿದ್ದೆ
ಏಕೊ ಮುನಿಶಾಪವನು ಪಡೆದು ದೌವಾರಿಕರು
ರಾಕ್ಷಸರೆ ಆದರೈ ರಾಮಚಂದ್ರ

**ತ್ರೇತಾಯುಗೇ ವಿಶ್ರವಸಃ ಸುತೌ ತ್ರೌ**
**ಬಭೂವತೂ ರಾವಣಕುಂಭಕರ್ಣೌ ।**
**ವಿಧೇರ್ವರಾತ್ ಪ್ರಾಪ್ತಬಲೌ ಜಗಂತಿ**
**ಪ್ರಾಪೀಡಯೇತಾಂ ಕಿಲ ರಾಮಚಂದ್ರ ॥12॥**

ತ್ರೇತೆಯಲಿ ರಾವಣನು ಕುಂಭಕರ್ಣನುಮಾಗಿ
ಜಾತರಾದರು ವಿಧಿಯ ವರಗಳಂ ಪಡೆದು
ಪಾತಕದ ಹಾದಿಯಲಿ ನಡೆಯುತ್ತ ಲೋಕವನು
ಭೀತಿಯಲಿ ಕೆಡವಿದರು ರಾಮಚಂದ್ರ

**ಇಂದ್ರಾದಯೋ ಬ್ರಹ್ಮಪುರಸ್ಸರಾಸ್ತ್ವಾಂ**
**ಪ್ರಪೇದಿರೇ ರಾಕ್ಷಸಪೀಡಯಾರ್ತಾಃ ।**
**ತದ್ರಕ್ಷಣಾರ್ಥಂ ಭುವಿ ಮರ್ತ್ಯರೂಪ-**
**ಸ್ತ್ವಂ ಜಜ್ಞಿಷೇ ವತ್ಸಲ ರಾಮಚಂದ್ರ ॥13॥**

ರಕ್ಕಸರ ಪೀಡೆಯಂ ತಡೆಯಲಾರದೆ ಸುರರು
ವೈಕುಂಠದೊಳು ಬಂದು ನಿನ್ನ ಬೇಡಿದರು
ನೀಂ ಕರುಣೆಯಿಂ ಮರ್ತ್ಯರೂಪದಿಂ ಭೂಮಿಯೊಳ್
ಸ್ವೀಕರಿಸಿದ್ದೈ ಜನುಮ ರಾಮಚಂದ್ರ

**ದಶರಥ ಇತಿ ಲೋಕೇ ಖ್ಯಾತ ಆಸೀನ್ಮಹೀಪೋ**
**ರಘುಕುಲತಿಲಕೋಽಸೌ ಸತ್ಯಸಂಧೋ ವ್ಯರಾಜತ್ ।**
**ಶತಮಖಸಖಮೇನಂ ತ್ವಂ ವೃಣೀಷೇ ಸ್ಮ ಭೂಮೌ**
**ಪಿತರಮಖಿಲಲೋಕೈರ್ವಂದಿತಂ ರಾಮಚಂದ್ರ ॥14॥**

ಕ್ಷಿತಿಪಾಲದಶರಥಂ ರಘುವಂಶಭೂಷಣಂ
ಶತಮನ್ಯುಮಿತ್ರನೆಂದಿಳೆಯೊಳಾಖ್ಯಾತನುಂ.
ಸುತರು ಬೇಕೆಂದಿಷ್ಟಿ ತಾ ಮಾಡೆ ಅವನನ್ನೆ
ಪಿತನೆಂದು ನೀನೊಪ್ಪಿದ್ದೈ ರಾಮಚಂದ್ರ

ಆಪ್ನೋತ್ ಪಿತಾ ತ್ವಾಂ ಯಜನೈರ್ಮಹದ್ಭಿಃ
ಫಲಂ ತ್ವಮಾಸೀಃ ಸುಕೃತಸ್ಯ ಮಾತುಃ ।
ತ್ವಜ್ಜನ್ಮನಾ ಧನ್ಯಮಭೂತ್ ಸಮಸ್ತಂ
ಭಾನೋಃ ಕುಲಂ ತ್ವಂ ಜಯ ರಾಮಚಂದ್ರ ॥15॥

ತಂದೆ ಯಜ್ಞಗಳಿಂದ ಪಡೆದ ನಿನ್ನನು ದೇವ
ಮುಂದೆ ತಾಯಿಯು ಗೈದ ಪುಣ್ಯಫಲ ನೀನು
ಸಂದೇಹವೆನಗಿಲ್ಲ ಭಾನುಕುಲ ನಿನ್ನಿಂದ
ಚಂದ ಕಂಡಿತು ಮುದದಿ ರಾಮಚಂದ್ರ

ಕೌಸಲ್ಯಾಯಾಃ ಸುಕೃತವಿಭವಂ ಕೈಃ ಪದೈರ್ವರ್ಣಯೇಯಂ
ಯಸ್ಯಾ ಗರ್ಭೇ ಸಕಲಭುವನಗ್ರಾಮವೋಢಾ ತ್ವಮಾಸೀಃ ।
ಯಸ್ಯಾಃ ಸ್ತನ್ಯಂ ಮಧುರಮಪಿಬೋ ಭೂರ್ಯಖೇಲೋ ಯದಂಕೇ
ಯಸ್ಯಾಃ ಸ್ಕಂಧೇ ಭೃಶಮುಪವಿಶನ್ ಲಾಲಿತೋ ರಾಮಚಂದ್ರ ॥

ಕೌಸಲ್ಯೆಪುಣ್ಯವನು ಹೇಗೆ ಹೇಳುವೆ ನಾನು
ವಾಸಿಸಿದೆ ನೀನವಳ ಗರ್ಭದೊಳು ದೊರೆಯೆ
ಆಸೆಯಿಂ ಕುಡಿದೆ ನೀನವಳ ಮೊಲೆಹಾಲನ್ನು
ಆ ಸುಕೃತ ಯಾರಿಗಿದೆ ರಾಮಚಂದ್ರ

ಕೌಶೇಯವಸ್ತ್ರಂ ವಿಮಲಂ ವಸಾನಃ
ಸುವರ್ಣಮುಕ್ತಾಭರಣಂ ದಧಾನಃ ।
ತ್ವದಂಗಧೂಲ್ಯಾ ಮಲಿನತ್ವಮಾಪ್ತ್ವಾ
ನನಂದ ಭೂಪೋ ನನು ರಾಮಚಂದ್ರ ॥17॥

ರೇಶಿಮೆಯ ಬಟ್ಟೆಗಳನುಟ್ಟು ಶೋಭಿಸಿದವನು
ವೇಷಕೊಪ್ಪುವ ಚಿನ್ನದೊಡವೆಗಳ ತೊಟ್ಟವನು
ದಶರಥನು ತಾಂ ನಿನ್ನ ದೇಹಧೂಳಿಯು ಬೀಳೆ
ಖುಷಿಪಟ್ಟು ನಲಿದನೈ ರಾಮಚಂದ್ರ

ಕರಪ್ರಹಾರೈಃ ಪ್ರಜಹರ್ಷ ರಾಜಾ
ತುತೋಷ ಪಾದೇನ ಏತಾಡಿತಶ್ಚ ।
ಪುತ್ರೋऽತ್ರ ದೃಷ್ಟೋ ಮನುಜಸ್ಯ ತುಷ್ಟೇಃ
ಪೂರ್ಣಂ ನಿದಾನಂ ಖಲು ರಾಮಚಂದ್ರ ॥18॥

ಕೈಪೆಟ್ಟಿನಿಂ ರಾಜ ಕುಣಿದು ಕುಪ್ಪಳಿಸಿದನು
ನೀ ಪಾದದಿಂದೊದೆಯೆ ನಕ್ಕು ನಲಿದ
ಸತ್ಪುತ್ರದರ್ಶನವು ಮನುಜನಾನಂದಕ್ಕೆ
ಸಂಪೂರ್ಣಕಾರಣವು ರಾಮಚಂದ್ರ

ಪುಷ್ಪಂ ಫಲಂ ವಾಭರಣಂ ಧನಂ ವಾ
ಸಹೋದರೈಃ ಸಂವ್ಯಭಜಃ ಸದಾ ತ್ವಮ್ ।
ಭುಕ್ತಂ ನ ಯದ್ ಭ್ರಾತೃಭಿರೇವ ಸರ್ವೈಃ
ಸ್ಪೃಷ್ಟಂ ತ್ವಯಾ ತನ್ನಹಿ ರಾಮಚಂದ್ರ ॥19॥

ಕುಸುಮಗಳ ಹಣ್ಣುಗಳ ಹೇಮಮಣಿರತ್ನಗಳ
ನೀ ಸಹೋದರರೊಡನೆ ಹಂಚಿಕೊಂಡೆ
ವಸುವಸ್ತು ಸೋದರರಿಗಿಲ್ಲದೊಡೆ ನೀನದನು
ತುಸು ಮುಟ್ಟಲಿಲ್ಲವೈ ರಾಮಚಂದ್ರ

ಭೃತ್ಯೇಷು ದಾಸೇಷು ತಥಾ ಪ್ರಜಾಸು
ಸ್ನೇಹಸ್ತ್ವಯಾದರ್ಶಿ ನ ತೂಗ್ರಭಾವಃ ।
ಲೋಕಪ್ರಿಯಸ್ತ್ವಂ ಸ್ಮಿತಪೂರ್ವಭಾಷೀ
ಸದಾ ವ್ಯರಾಜಃ ಕಿಲ ರಾಮಚಂದ್ರ ॥20॥

ಭೃತ್ಯರಲಿ ದಾಸರಲಿ ಜನರಲ್ಲಿ ಸರ್ವದಾ
ಮಿಥ್ಯೆಯಿಲ್ಲದೆ ಮೈತ್ರಿಯಂ ನೀನು ತೋರ್ದೆ
ಸತ್ಯಸಂಧನೆ ಮುಗುಳುನಗೆಯೊಡನೆ ಮಾತಾಡಿ
ನಿತ್ಯ ನೀಂ ಶೋಭಿಸಿದೆ ರಾಮಚಂದ್ರ

ಬುದ್ಧ್ಯಾ ಚ ಶಕ್ತ್ಯಾ ವಿನಯೇನ ಚ ತ್ವಂ
ಗುರೂತ್ತಮಾನಾಂ ಹೃದಯಾನ್ಯಹಾರ್ಷೀ: ।
ಪ್ರೇಮ್ಣಾ ಚ ಹಾಸೇನ ಸದಾಪ್ಯಕಾರ್ಷೀ:
ಸ್ನಿಗ್ಧಾನ್ ಸತೀರ್ಥ್ಯಾನ್ ಕಿಲ ರಾಮಚಂದ್ರ ॥21॥

ಬುದ್ಧಿಯಿಂ ಶಕ್ತಿಯಿಂ ವಿನಯದಿಂ ಗುರುಗಳನು
ಶುದ್ಧ ಚಾರಿತ್ರದಿಂ ನೀನೊಲಿಸಿಕೊಂಡೆ
ವೃದ್ಧಿಶೀಲನೆ ನಿನ್ನ ಸಹಪಾಠಿಗಳ ಮನವ
ಸದ್ಹಾಸದಿಂ ಗೆದ್ದೆ ರಾಮಚಂದ್ರ

ವೃಂದಾರಕಾಣಾಮಪಿ ವಂದ್ಯಸತ್ತ್ವೋ
ವೃಂದಾರಕಸ್ತ್ವಂ ವರಪುತ್ರವೃಂದೇ
ಜೈವಾತೃಕ: ಪಂಕ್ತಿರಥಸ್ಯ ಧಾಮ್ನಾ
ಜೈವಾತೃಕಂ ಜೇಷ್ಯಸಿ ರಾಮಚಂದ್ರ ॥22॥

ದೇವತೆಗಳಿಗು ವಂದ್ಯ ದೇವಾಧಿದೇವ ನೀಂ
ಸರ್ವಸುತರೊಳು ನೀನೆ ಪೂಜ್ಯತಮನು
ಜೈವಾತೃಕಂ ನೀನು ದಶರಥಗೆ ಕಾಂತಿಯಿಂ
ಜೈವಾತೃಕನ ಗೆಲುವೆ ರಾಮಚಂದ್ರ

ಸೌಮಿತ್ರಿಣಾ ತ್ವಂ ಭರತೇನ ಸಾರ್ಧಂ
ಶತ್ರುಘ್ನನಾಮ್ನಾ ಚ ಸಹೋದರೇಣ ।
ಶಸ್ತ್ರಂ ಚ ಶಾಸ್ತ್ರಂ ಬಹುಧಾಧ್ಯಗೀಷ್ಠಾ
ಲೋಕೋಪದೇಶಾಯ ನು ರಾಮಚಂದ್ರ ॥23॥

ಸೌಮಿತ್ರಿಯೊಡಗೂಡಿ ಭರತಶತ್ರುಘ್ನರುಂ
ಸಾಮಾದಿವಿದ್ಯೆಗಳ ಶಸ್ತ್ರಶಾಸ್ತ್ರಗಳ
ನೇಮದಿಂ ನಿನ್ನೊಡನೆ ಕಲಿತರೈ ಲೋಕಕ್ಕೆ
ಧೀಮಂತರಾದರ್ಶ ರಾಮಚಂದ್ರ

ವಿಶ್ವಾಮಿತ್ರೋ ವಿದಿತಮಹಿಮಾ ವೈ ಯಿಯಕ್ಷುರ್ಮುನೀಂದ್ರಃ
ಪ್ರಾಪ್ತೋಽಯೋಧ್ಯಾಂ ದಶರಥನೃಪಂ ಸಂಯಯಾಚೇ ತ್ವದರ್ಥಮ್।
ತ್ವಾಮಜ್ಞಾಸೀತ್ ಪರಮಪುರುಷಂ ಬಾಲಮಪ್ಯೇಷ ಧನ್ಯೋ
ಧಾಮ್ನಾ ರತ್ನಂ ನ ಖಲು ವಯಸಾ ಪೂಜ್ಯತೇ ರಾಮಚಂದ್ರ ॥

ಜನ್ನವನು ಕೈಗೊಂಡು ಲೋಕದೇಳಿಗೆಗಾಗಿ
ನಿನ್ನನೊಯ್ಯಲು ಬಂದ ಮುನಿಪ ವಿಶ್ವಾಮಿತ್ರ
ಪನ್ನಗಾಶನಶಯನ ಹರಿಯು ನೀನೇಯೆಂದು
ಚೆನ್ನಾಗಿ ತಿಳಿದವನು ರಾಮಚಂದ್ರ

ಬಾಲಕನ ನನ್ನೊಡನೆ ಕಳುಹಿಸ್ಸೆ ದಶರಥನೆ
ಪಾಲಿಸ್ಸೆ ಕುಲಧರ್ಮಗಳನೆಂದು ಮುನಿ ನುಡಿದ
ಹೊಳೆವ ರತ್ನದ ಗುಣವ ವಯಸಿನಿಂದೆಣಿಸುವರೆ
ಬೆಲೆಯದಕೆ ಕಾಂತಿಯಿಂ ರಾಮಚಂದ್ರ

ದಶರಥತನಯಾನಾಂ ಪ್ರಾಪ್ತವಿದ್ಯಾನಯಾನಾಮ್
ಅಧಿಗತವಿನಯಾನಾಮಗ್ರಣೀಸ್ತ್ವಂ ಸದಾಽಸೀಃ।
ಧನುಷಿ ವಚಸಿ ಧರ್ಮೇ ಕರ್ಮಣಿ ಜ್ಞಾನಮಾರ್ಗೇ
ಪ್ರಥಮ ಇತಿ ಮುನಿಸ್ತ್ವಾಮಭ್ಯಧಾದ್ ರಾಮಚಂದ್ರ ॥25॥

ದಶರಥನ ಸುತರೆಲ್ಲ ಲಬ್ಧವಿದ್ಯಾಗುಣರ್
ಕುಶಲರವರೆಲ್ಲರೊಳ್ ನೀನೆ ಮುಂದಾಳು
ವಿಶದಧರ್ಮಾದಿ ಮಾತಿನೊಳ್ ಧನುರ್ವೇದದೊಳ್
ಋಷಿ ಪೇಳ್ದ 'ನೀಂ ಪ್ರಥಮ' ರಾಮಚಂದ್ರ.

**ಸತಾಂ ಚ ರಕ್ಷಾಮಸತಾಂ ವಿನಾಶಂ**
**ಭೂಮೌ ವಿಧಾತುಂ ತ್ವಮಿಹಾವತೀರ್ಣ: ।**
**ಪುರಾಣಗೀತಂ ಧನುರಗ್ರಹೀ: ಕಿಂ**
**ಧರ್ಮಪ್ರತಿಷ್ಠಾಪಕ ರಾಮಚಂದ್ರ ॥26॥**

ಸಂತರಂ ರಕ್ಷಿಸಲು ಖೂಳರಂ ಶಿಕ್ಷಿಸಲು
ಚಿಂತೆಯಿಲ್ಲದೆ ಧರೆಯೊಳವತರಿಸಿ ನೀನು
ಸಂತತಂ ಧರ್ಮವನು ಕಾಪಾಡಿ ಪೋಷಿಸಲು
ಕಂತುಪಿತ ಪಿಡಿದೆ ಧನು ರಾಮಚಂದ್ರ

**ಜನಸ್ಯ ಶೋಕೋ ಭವತೋಽಪಿ ಶೋಕ-**
**ಸ್ತಸ್ಯೈವ ಹರ್ಷೋ ಭವತ: ಪ್ರಹರ್ಷ: ।**
**ಸುಖಂ ಚ ದು:ಖಂ ಭವತಾ ಸ್ವಕೀಯಂ**
**ಕ್ವಚಿತ್ತು ನಾಗಣ್ಯತ ರಾಮಚಂದ್ರ ॥27॥**

ಜನರ ದು:ಖವೆ ದು:ಖ ನಿನಗಾಯ್ತು ಮತ್ತವರ
ಮನದ ಸುಖವೇ ನಿನಗೆ ಪರಮಸುಖವು
ನಿನ್ನದೆನ್ನುವುದಿಲ್ಲ ಬೇರಾವ ಸುಖದು:ಖ
ನೀನೆ ಜಗಕಾದರ್ಶ ರಾಮಚಂದ್ರ

**ಶೌರ್ಯಂ ತವೈತಜ್ಜಗತಿ ಪ್ರಸಿದ್ಧಂ**
**ತಥಾಪಿ ಚಾಕ್ಷೇಪಲವೋಽಸ್ತಿ ತತ್ರ ।**
**ಸ್ತ್ರೀಹತ್ಯಯಾರಂಭ ಇತಿ ಪ್ರವಾದ:**
**ಕಥಂ ನಿವಾರ್ಯೋ ವದ ರಾಮಚಂದ್ರ ॥28॥**

ಶೌರ್ಯದೊಳ್ ನೀ ಮುಂದು ನಿನಗಾರು ಸಮರಲ್ಲ
ಕಾರ್ಯದೊಳ್ ನೀ ಕುಶಲನೆಂದು ವಿಖ್ಯಾತ
ಆರ್ಯ, ನಾರೀವಧೆಯ ನೀನೇಕೆ ಮಾಡಿದೆಯೊ
ಮರ್ಯಾದೆಗಿದು ಸರಿಯೆ ರಾಮಚಂದ್ರ ? ॥